# ನಾಡೋಜ ಡಾ. ಮಹೇಶ ಜೋಶಿ

**ಅಧ್ಯಕ್ಷರು**

## ಕನ್ನಡ ಸಾಹಿತ್ಯ ಪರಿಷತ್ತು

**ಕರ್ನಾಟಕ ಸರ್ಕಾರ ರಾಜ್ಯ ಸಚಿವರ ದರ್ಜೆಯ ಸ್ಥಾನಮಾನದಲ್ಲಿ**

ಸನಿಹವಾಣಿ : +೯೧ ೯೪೪೮೪ ೯೦೨೪೦ | ೮೦೭೩೦ ೦೬೮೭೪

ಸ್ಥಾಪನೆ : ೧೯೧೫

ಪಂಪ ಮಹಾಕವಿ ರಸ್ತೆ, ಚಾಮರಾಜಪೇಟೆ, ಬೆಂಗಳೂರು – ೫೬೦ ೦೧೮. ಮಿಂಚಂಚೆ : nadojamj@gmail.com

ದೂರವಾಣಿ : ೦೮೦ ೨೬೬೨೩೫೮೪ / ೨೬೬೧೨೯೯೧ ೦೮೦ ೨೨೪೨೩೮೬೭ / ೨೬೬೭೨೯೯೨ ।


೨.೪.೨೦೨೪.

ಆತ್ಮೀಯ ಕನ್ನಡ ಮನಸ್ಸುಗಳೇ,

೧. ತಾವು ಕನ್ನಡ ಸಾಹಿತ್ಯ ಪರಿಷತ್ತಿನ ಸದಸ್ಯರಾಗುವ ಮೂಲಕ ಸದಸ್ಯತ್ವದ ಅಭಿಯಾನದ ನಮ್ಮ ಕನಸಿಗೆ ನೆರವನ್ನು ನೀಡಿದ್ದೀರಿ, ಇದಕ್ಕಾಗಿ ಹಾರ್ದಿಕ ವಂದನೆಗಳು. ಕನ್ನಡವನ್ನು ಉಳಿಸುವ, ಬೆಳೆಸುವ ಮಹತ್ವಾಕಾಂಕ್ಷೆಗೆ ತಮ್ಮಿಂದ ಮಹತ್ವದ ಬೆಂಬಲ ದೊರಕಿದೆ. ಇದಕ್ಕಾಗಿ ಧನ್ಯವಾದಗಳು.

೨. ಬಹಳ ಜನ ಸದಸ್ಯತ್ವದ ಗುರುತಿನ ಚೀಟಿಯ ನಿರೀಕ್ಷೆಯಲ್ಲಿದ್ದೀರಿ, ಅದು ಸಹಜ ಕೂಡ, ಆದರೆ ಕೆಲವು ತಾಂತ್ರಿಕ ಕಾರಣಗಳಿಂದ ಸದಸ್ಯತ್ವದ ಗುರುತಿನ ಚೀಟಿ ನೀಡುವಿಕೆ ನಮ್ಮ ಕೈ ಮೀರಿದ ಕಾರಣದಿಂದ ವಿಳಂಬವಾಗುತ್ತಿದೆ ಇದಕ್ಕಾಗಿ ವಿಷಾದಿಸುತ್ತೇನೆ.

೩. ತಾವು ಸದಸ್ಯತ್ವದ ನೊಂದಣಿ ಮಾಡಿಕೊಂಡ ಕೂಡಲೇ ತಮ್ಮ ಸದಸ್ಯತ್ವದ ಸಂಖ್ಯೆ ಹಾಗೂ ಅಂತರ್ಜಾಲ (ಆ್ಯಪ್) ಮೂಲಕ ತಾತ್ಕಾಲಿಕ ಗುರುತಿನ ಚೀಟಿ ಎರಡೂ ದೊರಕುತ್ತದೆ. ಕನ್ನಡ ಸಾಹಿತ್ಯ ಪರಿಷತ್ತಿನ ಸದಸ್ಯತ್ವದ ಸೌಲಭ್ಯಗಳನ್ನು ಪಡೆಯಲು ಇದು ಸಾಕಾಗುತ್ತದೆ. ಹೀಗಾಗಿ ಸದಸ್ಯತ್ವದ ಗುರುತಿನ ಚೀಟಿ ಪಡೆಯುವಲ್ಲಿ ಆಗುವ ವಿಳಂಬ ತಮಗೆ ಸದಸ್ಯತ್ವದ ಸೌಲಭ್ಯಗಳನ್ನು ಬಳಸಿಕೊಳ್ಳಲು ತೊಡಕನ್ನು ಉಂಟು ಮಾಡುವುದಿಲ್ಲ ಎನ್ನುವುದನ್ನು ತಮ್ಮ ಗಮನಕ್ಕೆ ತರುತ್ತಿದ್ದೇವೆ.

೪. ಸದಸ್ಯತ್ವದ ಗುರುತಿನ ಚೀಟಿ ಎಂದರೆ ಸ್ಮಾರ್ಟ್ ಕಾರ್ಡ್ ವಿಳಂಬವಾಗಲು ಬಹಳ ಮುಖ್ಯವಾದ ಕಾರಣವೆಂದರೆ ಐದು ಲಕ್ಷ ರೂಪಾಯಿಗಳಿಗಿಂತ ಹೆಚ್ಚಿನ ವೆಚ್ಚವನ್ನು ಮಾಡಲು ಕನ್ನಡ ಸಾಹಿತ್ಯ ಪರಿಷತ್ತು ಈಗ ಅಸ್ತಿತ್ವದಲ್ಲಿರುವ ಕಾನೂನುಗಳ ಅನ್ವಯ ಒಂದೋ ಟೆಂಡರ್ ಪ್ರಕ್ರಿಯೆಗಳನ್ನು ಅನುಸರಿಸಬೇಕು. ಅದು ಬಹಳ ಸಂಕೀರ್ಣ ಪ್ರಕ್ರಿಯೆ ಆಗಿದ್ದು, ಕನ್ನಡ ಸಾಹಿತ್ಯ ಪರಿಷತ್ತು ತನ್ನ ಮಿತಿಯಲ್ಲಿ ಅದನ್ನು ಜಾರಿಗೆ ತರುವುದು ಕಷ್ಟ. ಇದಕ್ಕಿರುವ ಇನ್ನೊಂದು ದಾರಿ ಎಂದರೆ ೪ ಜಿ ವಿನಾಯಿತಿಯನ್ನು ಪಡೆದ ಸಂಸ್ಥೆಗಳ ಮೂಲಕ ಈ ಯೋಜನೆಯನ್ನು ನಿರ್ವಹಿಸಬೇಕು. ಕರ್ನಾಟಕ ಸರ್ಕಾರದಿಂದ ಇಂತಹ ಅನುಮತಿಯನ್ನು ಪಡೆದ “ಕಿಯೋನಿಕ್ಸ್ ಸಂಸ್ಥೆ”ಯಿಂದ ಕನ್ನಡ ಸಾಹಿತ್ಯ ಸದಸ್ಯರಿಗೆ ಗುರುತಿನ ಚೀಟಿಯನ್ನು ನೀಡುವ ಪ್ರಕ್ರಿಯೆಯನ್ನು ನಡೆಸುತ್ತಿದ್ದೆವು. ಈಗ ಕಿಯೋನಿಕ್ಸ್ ಸಂಸ್ಥೆಯು ೪ ಜಿ ಅನುಮತಿಯನ್ನು ಕಳೆದುಕೊಂಡಿದ್ದು, ಇಡೀ ಪ್ರಕ್ರಿಯೆಯನ್ನು ತ್ರಿಶಂಕು ಸ್ಥಿತಿಗೆ ನಿಲ್ಲಿಸಿದೆ. ನಾವು ಈಗ ಈ ಪ್ರಕ್ರಿಯೆಯನ್ನು ಕರ್ನಾಟಕ ಸರ್ಕಾರದಿಂದ ೪ ಜಿ ವಿನಾಯಿತಿಯನ್ನು ಪಡೆದಿರುವ, ಎಂ.ಸಿ.ಎ( MCA) ಸಂಸ್ಥೆಯ ಮೂಲಕವೇ ನಡೆಸ ಬೇಕಾಗಿದೆ. ಈ ಸಂಸ್ಥೆಯಲ್ಲಿ ನೊಂದಾಯಿತವಾಗಿರುವ ಕಾರ್ಯ ನಿರ್ವಾಹಕರು ಈ ಪ್ರಕ್ರಿಯೆಯನ್ನು ಜರುಗಿಸಬೇಕಾಗುತ್ತದೆ. ಇದು ದೀರ್ಘ ಪ್ರಕ್ರಿಯೆಯಾಗಿದ್ದು ಕನಿಷ್ಠ ಮೂರು ನಾಲ್ಕು ತಿಂಗಳಾದರೂ ಅನಿವಾರ್ಯವಾಗಿ ಈ ಪ್ರಕ್ರಿಯೆಗೆ ಬೇಕಾಗುತ್ತದೆ. ಈಗ ಚುನಾವಣಾ ನೀತಿ ಸಂಹಿತೆ ಕೂಡ ಜಾರಿಯಲ್ಲಿರುವುದರಿಂದ, ಆಡಳಿತಾತ್ಮಕ ನಿರ್ಧಾರಗಳನ್ನು ತೆಗೆದುಕೊಳ್ಳುವುದು ಅಸಾಧ್ಯವಾಗಿದೆ.

೫. ತಾವು ಕಾಯುವುದು ಅನಿವಾರ್ಯವಾದರೂ ತಮಗೆ ಉತ್ತಮ ಗುಣಮಟ್ಟದ ಗುರುತಿನ ಚೀಟಿಯನ್ನು ನಾವು ಖಂಡಿತವಾಗಿಯೂ ನೀಡುತ್ತೇವೆ. ಇದುವರೆಗೂ ಕನ್ನಡ ಸಾಹಿತ್ಯ ಪರಿಷತ್ತು ವಿತರಿಸಿರುವ ಗುರುತಿನ ಚೀಟಿಯ ಬಗ್ಗೆ ಪ್ರಶಂಸೆಯ ಸುರಿಮಳೆಯೇ ಬಂದಿದೆ. ಗುರುತಿನ ಚೀಟಿಯ ಸ್ವರೂಪದ ಬಗ್ಗೆ, ಅದರ ಮೇಲು ಹೊದಿಕೆ, ವಿನ್ಯಾಸ, ಕೊರಳ ಪಟ್ಟಿ, ಚಿಪ್ ಅಳವಡಿಸಿರುವ ಕ್ರಮ ಎಲ್ಲವನ್ನೂ ಜನ ಮೆಚ್ಚಿದ್ದಾರೆ. ತಮಗೂ ಇಂತಹದೇ ಉತ್ತಮ ಗುಣಮಟ್ಟದ ಕಾರ್ಡ್ ದೊರಕಲಿದೆ. ಇಡೀ ಪ್ರಕ್ರಿಯೆ ಕಂಪ್ಯೂಟರ್ ಆಧಾರದಲ್ಲಿ ನಡೆಯುವುದರಿಂದ, ಸರದಿ ಆಧಾರದ ಮೇಲೆಯೇ ಗುರುತಿನ ಚೀಟಿಯನ್ನು ನೀಡಲಿದ್ದು, ಇಲ್ಲಿ ಸರದಿ ಮುರಿಯುವ ಸಾಧ್ಯತೆಯೇ ಇಲ್ಲ. ಈಗಾಗಲೇ ಸಾವಿರಾರು ಜನ ಸರದಿಯಲ್ಲಿದ್ದು ತಮ್ಮ ಸರದಿಗಾಗಿ ಕಾಯಬೇಕೆಂದು ಈ ಮೂಲಕ ವಿನಂತಿಸಿಕೊಳ್ಳುತ್ತೇವೆ.

೬. ವಿಳಂಬ ಅನಿವಾರ್ಯವಾಗಿದೆ. ಅದಷ್ಟು ಬೇಗ ಈ ಸಮಸ್ಯೆಗೆ ನಾವು ಪರಿಹಾರ ಕಂಡುಕೊಳ್ಳುವ ಪ್ರಯತ್ನದಲ್ಲಿದ್ದು, ತಾವು ದಯಮಾಡಿ ಸಹಕರಿಸಬೇಕಾಗಿ ವಿನಂತಿ.

ಕನ್ನಡವನ್ನು ಕಟ್ಟುವಲ್ಲಿನ ತಮ್ಮ ಸಲಹೆ ಸೂಚನೆಗಳಿಗೆ ಸದಾ ಸ್ವಾಗತವಿದೆ.

(ನಾಡೋಜ ಡಾ.ಮಹೇಶ ಜೋಶಿ)
ಅಧ್ಯಕ್ಷರು
ಕನ್ನಡ ಸಾಹಿತ್ಯ ಪರಿಷತ್ತು